# ಗೋ ವಿಶ್ವ

Cow Universe

गौ विश्व

ಸರ್ವಜಿತ್ ಸಂವತ್ಸರ | ಮಾರ್ಗಶಿರ | ಜನವರಿ ೨೦೦೮ | ಸಂಪುಟ–೨ | ಸಂಚಿಕೆ–೧


ಗುರುವಾಣಿ

## ಹೊಸ ಶಖೆಗೆ ಮುನ್ನುಡಿ ಬರೆಯೋಣ



### ಹೂರಣ


ಪ್ರಶ್ನೋತ್ತರ

ಅಮೇರಿಕಾದಲ್ಲಿ "ಬ್ರಹ್ಮನ್" ಆದ ಭಾರತದ ಬ್ರಾಹ್ಮಣೀ ಗೋತಳಿಗಳು

ಗೋ ಚಾಲಿತ ಲ್ಯಾಪ್‌ಟಾಪ್

ಅಮೃತಮಹಲ್ – ಒಂದು ಖಾಸಾ ಅನುಭವ

ಮಾಸದ ಗೋವು – ಅಮೃತಮಹಲ್

ಸೆಗಣಿಯಿಂದ ಅನಿಲೋತ್ಪಾದನೆ




ವ್ಯಾವಹಾರಿಕ ದಿನದರ್ಶಿಕೆಯ ಮತ್ತೊಂದು ವರ್ಷ ಆರಂಭವಾಗಿದೆ. ನಿರಂತರ ಉರುಳುವ ಕಾಲಕ್ಕೆ ಯಾವುದೇ ಮಿತಿಯಿಲ್ಲ. ಆದಾಗ್ಯೂ ಜೀವನ ಚಕ್ರದ ದಾಖಲೆಯನ್ನು ಗುರುತಿಸಲು ನಾವು ವರ್ಷದ ಕಾಲಘಟ್ಟವನ್ನು ನಿಗದಿಪಡಿಸಿಕೊಂಡಿದ್ದೇವೆ. ಅಂಥ ಇನ್ನೊಂದು ವರ್ಷಕ್ಕೆ ಮುನ್ನುಡಿ ಹಾಡಿದ್ದೇವೆ.

ಸಿಂಹಾವಲೋಕನಕ್ಕೆ ಇದು ಸೂಕ್ತ ಸಮಯ. ಹಾಗೆ ನೋಡಿದರೆ ಗತಿಸಿದ ವರ್ಷ ಹತ್ತು ಹಲವು ರೀತಿಯಲ್ಲಿ ಮಹತ್ವವನ್ನು ಪಡೆಯುತ್ತದೆ. ಗೋ ಸಂರಕ್ಷಣೆಯ ನಮ್ಮ ಜೀವಮಾನದ ಗುರಿ ಸಾಧನೆಯ ನಿಟ್ಟಿನಲ್ಲಿ ತೃಣವನ್ನು ಮುಟ್ಟಿದ ಅನುಭೂತಿಯಲ್ಲಿದ್ದೇವೆ. ವಿಶ್ವ ಗೋ ಸಮ್ಮೇಳನ, ಕೋಟಿ ನೀರಾಜನ, ಗೋ ಸಂಧ್ಯೆಗಳಂಥ ಅಪೂರ್ವ ಕ್ಷಣಗಳಿಗೆ ಸಾಕ್ಷಿಯಾಗಿರುವ ೨೦೦೭ ನೇ ಸಾಲನ್ನು ಆಂದೋಲನದ ಸುಂದರ ಪಲ್ಲವಿ ಎನ್ನಲಡ್ಡಿಯಿಲ್ಲ. ಇದೇ ಧಾಟಿಯಲ್ಲಿ ಮುದಿನ ಚರಣಗಳ ರಚನೆಯಾಗಬೇಕಿದೆ.

ಈ ಹಂತದಲ್ಲಿ ವಿಶ್ವ ಗೋ ಸಮ್ಮೇಳನ ಸಂದರ್ಭದಲ್ಲಿ ನಾವು ಚರ್ಚಿಸಿದ ಕೆಲ ಸಂಗತಿಯನ್ನು ಮತ್ತೆ ನೆನಪಿಸಿಕೊಳ್ಳುವುದು ಉಚಿತ ಎನಿಸುತ್ತಿದೆ. ಗೋ ರಕ್ಷಣೆಗಾಗಿ ಅಂತಿಮ ಸಮರಕ್ಕೆ ಈಗಾಗಲೇ ಅಣಿಯಾಗಿದ್ದೇವೆ. ಗೋ ಸಮ್ಮೇಳನದ ಸಮಾರೋಪವೇ ಇದಕ್ಕೆ ಮುಕ್ತ ವೀಳ್ಯ. ಇತಿಹಾಸದುದ್ದಕ್ಕೂ ಬರೆದ ಗೋ ಪರ ಸಮರದ ಅಧ್ಯಾಯಕ್ಕೆ ಮಂಗಳಮಯ ಬೆನ್ನುಡಿಯನ್ನು ಬರೆಯುವ ಕೈಂಕರ್ಯ ಆರಂಭವಾಗಿದೆ. ಅದು ಖಂಡಿತಾ ವಿಷಾದರಹಿತವಾಗಿರುತ್ತದೆ ಎಂಬ ನಂಬಿಕೆ ನಮ್ಮದು. ದೇಶಾದ್ಯಂತ ವ್ಯಕ್ತವಾಗುತ್ತಿರುವ ಅಭೂತಪೂರ್ವ ಬೆಂಬಲವೇ ಇದಕ್ಕೆ ಸಾಕ್ಷಿ. ಹೀಗಾಗಿ ಗೋ ಪರವಾದ ಸಮರದಲ್ಲಿ ಜಯ ನಮಗೇ ನಿಶ್ಚಿತ. ಕೋಟ್ಯಂತರ ಭಾರತೀಯರ ನಂಬಿಕೆಯ ಕೇಂದ್ರವಾಗಿರುವ ದೈವೀ ಶಕ್ತಿಯೂ ಇದರ ಹಿಂದೆ ಇದೆ ಎಂಬುದಕ್ಕೆ ಈಗಾಗಲೇ ಹಲವಾರು ನಿದರ್ಶನಗಳು ಸಿಕ್ಕಿವೆ. ಪ್ರತಿ ಹೆಜ್ಜೆಗೂ ಇನ್ನಷ್ಟು, ಮತ್ತಷ್ಟು ಕ್ರಿಯಾಶೀಲ ಮನಸ್ಸುಗಳು ಜತೆಗೂಡುತ್ತಿರುವುದೂ ವಿಶ್ವಾಸವನ್ನು ದೃಢಪಡಿಸಿದೆ.

ಸಮಾರೋಪ ಎಂದರೆ ಇನ್ನೊಂದರ ಆರಂಭವೆಂದೇ ಅರ್ಥ. ವಿಕ್ರಮಾದಿತ್ಯ ಶಖೆ, ಶಾಲಿವಾಹನ ಶಖೆ, ಕ್ರಿಸ್ತ ಶಖೆ ಇತ್ಯಾದಿಗಳನ್ನು ನೀವು ಕೇಳಿದ್ದೀರಿ. ಇದು ಹೊಸ ಶಖೆ, ವಿಶ್ವ ಗೋ ಸಮ್ಮೇಳನದೊಂದಿಗೆ ಗೋ ಶಖೆ ಎಂಬುದು ಆರಂಭಗೊಂಡಿದೆ. ಆರಂಭವಾಗಿರುವ ಕ್ರಿಸ್ತ ಶಖೆಯ ಹೊಸ ವರ್ಷ ಗೋ ಶಖೆಯ ಭಾಗವಾಗಲಿ ಎಂಬುದು ನಮ್ಮ ಆಶಯ. ನೂತನ ಕ್ರಿಸ್ತವರ್ಷ ಇನ್ನೊಂದು ಮಹಾಶಕ್ತಿಯ ಆರಂಭ, ಗೋವಿನ ಆಮೂಲಕ ರಾಷ್ಟ್ರ ಜೀವನದ ಅಭ್ಯುದಯಕ್ಕೆ ಈ ಮೂಲಕ ಶ್ರೀಕಾರ ಹಾಕಲಾಗಿದೆ.

ಅದು ಸಂಘಟನೆ, ಗೋ ರಕ್ಷಣೆಯ ರಾಷ್ಟ್ರೀಯ ಸಂಘಟನೆ. ರಾಷ್ಟ್ರಾದ್ಯಂತ ಗೋ ಪರಿವಾರದ ರಚನೆಯೊಂದಿಗೆ ಸಮರ್ಥ ಯುವ ಪಡೆಯೊಂದನ್ನು ಸಜ್ಜುಗೊಳಿಸುವ ಯೋಜನೆಯೊಂದಿಗೆ ನಾವು ಮುಂದಡಿ ಇಡುತ್ತಿದ್ದೇವೆ.

ಆಂದೋಲನದ ಹೊಳೆ ಈ ವರ್ಷ ಪೂರ್ತಿ ತುಂಬಿ ಹರಿಯಬೇಕು. ಹೊಳೆಯ ನೀರು ಹರಿದು ಆವಿಯಾಗಿ ಮೋಡವಾಗಿ ಪರಿವರ್ತನೆಗೊಂಡು ಮತ್ತೊಂದು ಮಳೆಗೆ ಕಾರಣವಾಗಬೇಕು. ಅಲ್ಲಿಗೆ ಹೊಳೆಯ ಹರಿವು ನಿರಂತರವಾಗಿ ಸಾಗಬೇಕು. ಅದು ಅಷ್ಟಕ್ಕೇ ಸೀಮಿತವಾಗದೇ ಗೋ ಭಕ್ತಿಯ ಸಮುದ್ರ ಸೇರಿ ಅಲ್ಲಿ ಉಬ್ಬರವೇಳಬೇಕು. ಆಗ ಮಾತ್ರ ಎಲ್ಲೆಡೆಯಲ್ಲೂ ಸುಭಿಕ್ಷ ನೆಲೆಗೊಳ್ಳಲು ಸಾಧ್ಯ.

ಗೋವು ನಮ್ಮಿಂದ ಐಶ್ವರ್ಯ ಕೇಳದು, ಸಂಪತ್ತು ಕೇಳದು. ***ಅದಕ್ಕೆ ಬೇಕಿರುವುದು ಸಹಜ ಹುಟ್ಟು, ನಿರ್ಭಯ ಬದುಕು, ಯಾತನಾ ರಹಿತ ಸಾವು***. ಅಂಥ ಜೀವಾಧಿಕಾರದ ಹಕ್ಕನ್ನು ನಾವದಕ್ಕೆ ಒದಗಿಸಿಕೊಡಬೇಕಿದೆ.

ಮಾನವ ಹಕ್ಕುಗಳ ಬಗ್ಗೆ ವಿಶ್ವದೆಲ್ಲೆಡೆ ಮಾತು ಕೇಳಿ ಬರುತ್ತಿದೆ. ಆದರೆ ಗೋವಿನ ಜೀವದ ಹಕ್ಕಿನ ಬಗ್ಗೆ ಮಾತ್ರ ಎಲ್ಲರೂ ಮೂಕರಾಗಿದ್ದಾರೆ. ಅವುಗಳ ಹುಟ್ಟು ಕೃತಕವಾಗಿದೆ. ಬದುಕು ದುರ್ಭರವಾಗಿದೆ. ತಳಿಸಂಕರ, ವಧೆ ಎರಡೂ ಗೋವಿಗೆ ಸಂಕಟ ತರುವ ವಿಚಾರ. ಇಂಥ ಸಂಕಟದ ಪ್ರಮೇಯ ಇನ್ನೆಂದೂ ಈ ಭರತ ಭೂಮಿಯಲ್ಲಿ ಬಾರಲೇಕೂಡದೆಂಬ ಮಹಾ ಸಂಕಲ್ಪದೊಂದಿಗೆ ಹೊಸ ವರ್ಷವನ್ನು ಸ್ವಾಗತಿಸೋಣ.

ಗೋ ಸಂರಕ್ಷಣೆಗೆ ಎಲ್ಲ ತ್ಯಾಗಕ್ಕೂ ಸಿದ್ಧವೆಂಬುದನ್ನು ಈಗಲೂ ನಾವು ಪುನರುಚ್ಚರಿಸುತ್ತೇವೆ. ಈ ನಿಟ್ಟಿನಲ್ಲಿ ನಮ್ಮೆಲ್ಲನಿರ್ವೀರ್ಯತನವನ್ನು ಮೀರಿ ನಿಲ್ಲೋಣ. ಈ ಭರತ ಭೂಮಿ ಭಾರತಕ್ಕಾಗಿ ಅಲ್ಲ. ಇದು ವಿಶ್ವದ ಒಳಿತಿಗಾಗಿ ಇದ್ದುದು. ಅಂಥ ರಾಷ್ಟ್ರದಲ್ಲಿ ಗೋವು ಒಂದು ಪಶು ಮಾತ್ರವಲ್ಲ. ಅದು ರಾಷ್ಟ್ರ ಲಾಂಛನ. ಜೀವಪ್ರೀತಿಗೆ ಸಂಕೇತವಾದ ಗೋವನ್ನೇ ನಮ್ಮ ಜೀವ ಲಾಂಛನವಾಗಿಸಿಕೊಂಡು ಪ್ರತಿಯೊಬ್ಬ ಭಾರತೀಯನೂ ಸುಖ–ಸಂತೋಷಗಳನ್ನು ಹೊಂದೋಣ.

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಆಕಳ ಸಗಣಿ ಮತ್ತು ಗಂಜಲಕ್ಕೆ ಕೀಟನಾಶಕ ಸಾಮರ್ಥ್ಯ ಇದೆಯಂತೆ ಹೌದೇ?

ಉ: ಹೌದು. ಅವಕ್ಕೆ ಕೀಟನಾಶಕ ಗುಣ ಇದೆ. ಹುಳಿ ಮಜ್ಜಿಗೆಯನ್ನು ನೀರಿನಲ್ಲಿ ಬೆರೆಸಿ ಶಿಲೀಂದ್ರ ನಾಶಕವಾಗಿ ಬಳಸಲಾಗುತ್ತದೆ. ಗೋಮೂತ್ರ ಹಾಗೂ ಸಗಣಿಯೊಂದಿಗೆ ಬೇವಿನ ಸೊಪ್ಪು, ಎಕ್ಕ, ಲುನ್ತಾನ, ತುಳಸಿ, ಚಿತ್ರಮೂಲ, ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ, ತಂಬಾಕು ಮುಂತಾದವನ್ನು ಬೆರೆಸಿ, ವೈವಿದ್ಯಮಯ ಕೀತನಾಶಕಗಳನ್ನು ತಯಾರಿಸಿ ಯಶಸ್ವಿಯಾಗಿ ಬಳಸಲಾಗುತ್ತಿದೆ. ಇವು ಅಗ್ಗ ಹಾಗೂ ಸುರಕ್ಷಿತ. ಇದಕ್ಕಾಗಿ ರೈತ ಸಾಲ ಮಾಡಬೇಕಿಲ್ಲ.

ಪ್ರ: ಪಂಚಗವ್ಯ ಎಂದರೇನು? ಅದರ ಉಪಯೋಗವೇನು?

ಉ: ದೇಸಿ ಆಕಳಿನ ಹಾಲು, ಮೊಸರು, ತುಪ್ಪ, ಗೊಮಯ, ಮತ್ತು ಗೋಮೂತ್ರ – ಈ ಐದು ಪದಾರ್ಥಗಳನ್ನು ಬೆರೆಸಿ ತಯಾರಿಸುವ ದ್ರವ್ಯವೇ ಪಂಚಗವ್ಯ. ಪಂಚಗವ್ಯವನ್ನು ಧಾರ್ಮಿಕ ಸಮಾರಂಭಗಳಲ್ಲಿ ಹಲವರು ಸೇವಿಸಿದರೆ, ಕೆಲವರು ಪ್ರತಿನಿತ್ಯ ಸೇವಿಸುತ್ತಾರೆ. ಪಂಚಗವ್ಯ ಸೇವನೆಯಿಂದ ಶರೀರ ಶುದ್ಧಿಯಾಗುತ್ತದೆ ಹಾಗೂ ಶರೀರ ರೋಗ ಮುಕ್ತವಾಗುತ್ತದೆ ಎಂದು ಪುರಾತನ ಕಾಲದಿಂದಲೂ ದೃಡವಾಗಿ ನಂಬಲಾಗಿತ್ತು. ಈಗ ಅದಕ್ಕೆ ವೈಜ್ಞಾನಿಕ ಬೆಂಬಲವೂ ದೊರೆಯುತ್ತಿದೆ

ಪ್ರ: ಹಸುಗಳೆಂದರೆ ಹಾಲು ಕೊಡುವ ಯಂತ್ರಗಳೇ ?

ಉ: ಪ್ರಗತಿಪರರು (?) ಹಾಗೆಯೇ ತಿಳಿದಿದ್ದಾರೆ. ಪಶು ವಿಜ್ಞಾನಿಗಳು ಇದಕ್ಕೆ ಕೈ ಜೋಡಿಸಿದ್ದಾರೆ. ಡೈರಿ ದಂಧೆಯಲ್ಲಿ ಹಸುಗಳಿಗೆ ಹಾಲು ಕೊಡುವುದೊಂದೇ ಕೆಲಸ. ಕಟ್ಟಿದ ಜಾಗದಲ್ಲೇ ಆಹಾರ ತುರುಕುತ್ತಾರೆ. ಯಂತ್ರಗಳಿಂದ ಹಾಲು ಕರೆಯುತ್ತಾರೆ. ಅವಕ್ಕೆ ಸ್ವತಂತ್ರವಾಗಿ ಓಡಾಡುವ ಸ್ವಾತಂತ್ರವಿಲ್ಲ. ಹಾಲು ಕಡಿಮೆಯಾದ ಕೂಡಲೇ ಕಸಾಯಿಖಾನೆಗೆ ಯಾತ್ರೆ. ಈ ದಂಧೆಯಲ್ಲಿ ಅನುಕಂಪಕ್ಕೆ ಅವಕಾಶವೇ ಇಲ್ಲ.

**(ಸಂಗ್ರಹ: ಉಲ್ಲಾಸ ಸಿ.ಕೆ., ಸದಾಶಿವ ಮೊಂತಿಮಾರ್)**

# ಅಮೇರಿಕಾದಲ್ಲಿ "ಬ್ರಹ್ಮನ್" ಆದ ಭಾರತದ ಬ್ರಾಹ್ಮಣೀ ಗೋತಳಿಗಳು

ಪ್ರಪಂಚದ ಜಾನುವಾರುಗಳನ್ನು ದೇಹದ ಜೀವಕೋಶದಲ್ಲಿರುವ ವರ್ಣತಂತುಗಳ ಆಧಾರದ ಮೇರೆಗೆ ಎರಡು ಮುಖ್ಯ ಗುಂಪುಗಳಾಗಿ ವಿಂಗಡಿಸಲಾಗಿದೆ. ಅವು ಭಾರತೀಯ ತಳಿ ಅಥವಾ ಬಾಸ್ ಇಂಡಿಕಸ್ ಹಾಗೂ ಯುರೋಪ್ ತಳಿ ಅಥವಾ ಬಾಸ್ ಟಾರಸ್ ಎಂಬುದಾಗಿದೆ. ಭಾರತದ ಪಶುಪಾಲನಾ ಪದ್ಧತಿ ಬೇರೆ ದೇಶಗಳಿಗಿಂತ ಶ್ರೇಷ್ಠಮಟ್ಟದ್ದಾಗಿತ್ತೆಂದು ವೇದ ಪುರಾಣಗಳಿಂದ ವ್ಯಕ್ತವಾಗುತ್ತವೆ. ಇಂದು ನಾವು ಡೆನ್ಮಾರ್ಕ್, ಹಾಲೆಂಡ್, ಅಮೇರಿಕಾ, ಆಸ್ಟ್ರೇಲಿಯಾದಂತಹ ದೇಶಗಳಿಂದ ಹೈನು ಉತ್ಪಾದನಾ ತಳಿಗಳನ್ನು ಹೇಗೆ ಆಮದು ಮಾಡಿಕೊಳ್ಳುತ್ತಿದ್ದೇವೆಯೋ ಅದೇ ರೀತಿ ವಿದೇಶೀಯರು ನಮ್ಮಲ್ಲಿಯ ಉತ್ಕೃಷ್ಟ ತಳಿಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಕಾಲವೊಂದಿತ್ತು. ಅದೆಲ್ಲ ಈಗ ಇತಿಹಾಸ ಮಾತ್ರ. ಏಕೆಂದರೆ ನಾವು ವಿದೇಶೀ ವ್ಯಾಮೋಹದಲ್ಲಿ ನಮ್ಮತನವನ್ನು ಕಳೆದುಕೊಳ್ಳುತ್ತಿರುವ ಹಾಗೆಯೇ ನಮ್ಮ ಅಮೂಲ್ಯ ಗೋ ಸಂಪತ್ತನ್ನೂ ಕಳೆದುಕೊಂಡಿದ್ದೇವೆ. ಸ್ವತಂತ್ರ ಪೂರ್ವದಲ್ಲಿ ಸುಮಾರು ೭೦ಕ್ಕೂ ಹೆಚ್ಚು ಗೋ ತಳಿ ಇದ್ದದ್ದು ಇಂದು ಮೂವತ್ತು ತಳಿಗಳಿಗೆ ಸೀಮಿತವಾಗಿದೆ. ಅದರಲ್ಲೂ ಕೆಲವು ತಳಿಗಳು ವಿನಾಶದ ಅಂಚಿನಲ್ಲಿವೆ. ಆದರೆ ವಿದೇಶಗಳಲ್ಲಿ ಮಾತ್ರ ಬ್ರಾಹ್ಮಣೀ ತಳಿಗಳು ಬ್ರಹ್ಮನ್ ಎಂಬ ಹೆಸರಿನಲ್ಲಿ ವಿಜೃಂಭಿಸುತ್ತಿವೆ. ಇಂದು ಭಾರತೀಯ ಪೂಜನೀಯ ತಳಿಗಳೆಲ್ಲ ವಿದೇಶದ ಮಾಂಸದ ತಳಿಯಾಗಿರುವುದು ವಿಷಾದನೀಯ.

## ಬ್ರಾಹ್ಮಣಿಗಳು ಬ್ರಹ್ಮನ್ ಆದ ಬಗೆ

೧೮೫೮ರಲ್ಲಿ ಅಮೇರಿಕಾದ ರಿಚರ್ಡ್‌ಬಾರೋ ಎಂಬ ಕೃಷಿ ತಜ್ಞ ಬ್ರಿಟನ್ನಿನ ರೈತರಿಗೆ ಕಬ್ಬು ಮತ್ತು ಹತ್ತಿ ಬೆಳೆಯುವ ಬಗ್ಗೆ ಉತ್ತಮ ತರಬೇತಿ ನೀಡಿದ್ದಕ್ಕಾಗಿ ಬ್ರಿಟಿಷ್ ರಾಜರು ರಿಚರ್ಡ್ ಬಾರೋ ಅವರಿಗೆ ಕಾಣಿಕೆಯಾಗಿ ಎರಡು ಹಿಂದುಸ್ಥಾನದ ಬ್ರಾಹ್ಮಣೀ ಹೋರಿಗಳನ್ನು ಕೊಟ್ಟು ಸತ್ಕರಿಸಿದರಂತೆ. ಅಂದರೆ ಇದಕ್ಕೂ ಮೊದಲೇ ಬ್ರಿಟಿಷರು ಭಾರತದ ಉತ್ಕೃಷ್ಟ ಗೋ ತಳಿಗಳನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಿರುವುದು ಯಾರಿಗಾದರೂ ಅರ್ಥವಾಗುವಂತಹದು. ಮುಂದೆ ಈ ಎರಡು ಹೋರಿಗಳನ್ನು ಅಮೇರಿಕಾದ ದೇಶೀಯ ದನಗಳೊಂದಿಗೆ ಸಂಕರಗೊಳಿಸಿ ಅವುಗಳಿಂದ ಹುಟ್ಟಿದ ಪೀಳಿಗೆಗೆ ಬಾರೋ ಗ್ರೇಡ್ ದನಗಳೆಂದು ಪರಿಚಯಿಸಲಾಯಿತು. ಈ ಹೋರಿಗಳಿಂದ ಹುಟ್ಟಿದ ಕರುಗಳು ಉತ್ತಮ ಸಂತತಿಯ ದನಗಳೆಂದು ಕಂಡುಬಂದದ್ದರಿಂದ ೧೮೫೫ರಲ್ಲಿ ಹಿಂದುಸ್ಥಾನದಿಂದ ಮತ್ತೆರಡು ಬ್ರಾಹ್ಮಣೀ ತಳಿ ಹೋರಿಗಳನ್ನು ತರಿಸಿಕೊಂಡರು. ಈ ಹೋರಿಗಳನ್ನು ಅಲ್ಲಿಯ ಬಾರೋ ಗ್ರೇಡ್ ದನಗಳೊಂದಿಗೆ ಜೊತೆಗೂಡಿಸಿ, ಭಾರತೀಯ ದನಗಳ ವಂಶವಾಹಿಗಳನ್ನು ಅಮೆರಿಕನ್ ದನಗಳ ರಕ್ತದಲ್ಲಿ ಕೇಂದ್ರೀಕೃತವಾಗುವಂತೆ ಮಾಡಿದರು. ಹೀಗೆ ೧೯೨೦ರವರೆಗೆ ಭಾರತೀಯ ತಳಿಗಳಾದ ಗುಜರಾತ್ ನೆಲ್ಲೂರ್ (ಓಂಗೋಲ್), ಗೀರ್ ಹಾಗೂ ಕೃಷ್ಣಾ ತೀರ ಈ ನಾಲ್ಕು ತಳಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಯುಕ್ತ ಅಮೇರಿಕಾ ದೇಶಗಳಿಗೆ ಕೊಂಡೊಯ್ದು, ನಿರಂತರವಾಗಿ ವಿವಿಧ ರೀತಿಯಲ್ಲಿ ಸಂವರ್ಧನೆ ನಡೆಸಲಾಯಿತು. ಸುಮಾರು ೨೨ ಆಕಳುಗಳು ೨೬೬ ಬ್ರಾಹ್ಮಣೀ ಹೋರಿಗಳ ಸಂಕರದಿಂದ ಉದ್ಭವವಾದ ಈ ತಳಿಗೆ ಅವರಿಟ್ಟ ಹೆಸರು "ಅಮೇರಿಕನ್ ಬ್ರಹ್ಮನ್".

೧೯೨೪ರಲ್ಲಿ ಅಮೇರಿಕಾದಲ್ಲಿಯ ಪಶುಪಾಲಕರು "ಅಮೇರಿಕನ್ ಬ್ರಹ್ಮನ್ ಬ್ರೀಡರ್ಸ್ ಅಸೋಸಿಯೇಷನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡರು. ಇದೇ ರೀತಿ ಸಂಸ್ಥೆಯು ಆಸ್ಟ್ರೇಲಿಯಾ, ಬ್ರೆಜಿಲ್, ಮೆಕ್ಸಿಕೋ, ಕ್ಯೂಬಾ ಮುಂತಾದ ದೇಶಗಳಲ್ಲಿಯೂ ಕಂಡು ಬರುತ್ತವೆ. ೧೯೨೦ರಲ್ಲಿ ಟೆಕ್ಸಾಸ್ ದಲ್ಲಿಯ ಸೋನಾರ್‌ದ ಪ್ರಯೋಗ ಶಾಲೆಯಲ್ಲಿ ಬ್ರಾಹ್ಮಣಿ ದನಗಳು ಅಲ್ಲಿನ ಉಷ್ಣತೆ ಹಾಗೂ ಅತಿ ಶೀತ ವಾತಾವರಣಕ್ಕೆ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುವವು ಎಂಬುದಕ್ಕೆ ಹಲವಾರು ಪ್ರಯೋಗಗಳನ್ನು ಅಲ್ಲಿಯ ತಳಿಗಳಾದ ಹೇರ್ ಫೋರ್ಡ್ ಮತ್ತು ಶಾರ್ಟ್‌ಹಾರ್ನ್ ಜಾತಿಯ ದನಗಳನ್ನು ಉಪಯೋಗಿಸಿ ಸಂಕರ ಮಾಡಿದಾಗ ಹುಟ್ಟಿದ ಕರುಗಳು ಅಲ್ಲಿನ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಳ್ಳುವ ಜೊತೆಗೆ ಗಾತ್ರ ತೂಕದಲ್ಲಿ ತೀವ್ರವಾಗಿ ಬೆಳವಣಿಗೆ ಹೊಂದಿ ಮಾಂಸಖಂಡಗಳಿಂದ ತುಂಬಿಕೊಂಡದ್ದು ಕಂಡುಬಂತು. ಇದರ ಪರಿಣಾಮವಾಗಿ ಅಲ್ಲಿನ ಜನರು ಬ್ರಾಹ್ಮಣೀ ದನಗಳನ್ನು ಸಾಕಲು ಹೆಚ್ಚು ಆಸಕ್ತಿ ಉಳ್ಳವರಾದರು.

## ಆಕರ್ಷಕ ಗುಣ ಲಕ್ಷಣಗಳು

ಸಾಮಾನ್ಯವಾಗಿ ಈ ತಳಿಯ ಆಕಳುಗಳು ೨೦೦–೩೦೦ ಕೆ.ಜಿ, ಹೋರಿಗಳು ೪೫೦–೫೫೦ ಕೆ.ಜಿ. ತೂಗುತ್ತವೆ. ಕೊಂಬುಗಳು ಒರಟಾಗಿದ್ದು, ಉದ್ದ ಮತ್ತು ಅಗಲವಾಗಿ ಹೊರಭಾಗಕ್ಕೆ ಚಾಚಿಕೊಂಡಿರುತ್ತವೆ. ಈ ತಳಿಯ ಬಣ್ಣದಲ್ಲಿ ಏಕರೂಪತೆ ಹೊಂದದೆ ಬಿಳಿ, ಕಂದು, ಕೆಂಪು ಬಣ್ಣದ ಆಕಳುಗಳು; ಹೆಚ್ಚಾಗಿ ಗೋಧಿ ಬಣ್ಣ ಹಾಗೂ ಮೈ ತುಂಬಾ ಚುಕ್ಕೆಗಳನ್ನು ಹೊಂದಿದ ಹೋರಿಗಳಿರುವುದು ಸಾಮಾನ್ಯ. ಈ ದನಗಳ ಶರೀರ ಉದ್ದವಾಗಿದ್ದು, ಅಗಲ ಕಡಿಮೆ ಇರುತ್ತವೆ. ಕಾಲುಗಳು ಉದ್ದವಾಗಿದ್ದು, ಮೈ ಚರ್ಮ ಸಡಿಲವಾಗಿ, ಗಂಗೆದೊಗಲು ಬಹಳ ಉದ್ದವಾಗಿದ್ದು, ಜೋತಾಡುತ್ತಿರುತ್ತವೆ. ಈ ದನಗಳು ಬೆವರುವ ಪ್ರವೃತ್ತಿ ಹೊಂದಿದ್ದು, ಯಥೇಚ್ಛ ಮಾಂಸಖಂಡಗಳಿಂದ ತುಂಬಿಗೂಂಡಿರುತ್ತವೆ. ಕರುಗಳು ಹುಟ್ಟಿದಾಗ ೨೦–೩೦ ಕೆ.ಜಿ.ಗಳಷ್ಟಿದ್ದು, ತೀವ್ರಗತಿಯಲ್ಲಿ ಬೆಳೆಯುತ್ತವೆ. ಈ ತಳಿಯ ದನಗಳು ಬೆದರುವ ಪ್ರವೃತ್ತಿ ಹೊಂದಿದ್ದು, ಯಥೇಚ್ಛ ಮಾಂಸಖಂಡಗಳಿಂದ ತುಂಬಿಕೊಂಡಿರುತ್ತವೆ. ಕರುಗಳು ಹುಟ್ಟಿದಾಗ ೨೦–೩೦ ಕೆ.ಜಿ.ಗಳಷ್ಟಿದ್ದು, ತೀವ್ರಗತಿಯಲ್ಲಿ ಬೆಳೆಯುತ್ತವೆ. ಈ ತಳಿಯ ದನಗಳು ಸ್ವಾಭಾವಿಕವಾಗಿ ಬಿಸಿಲಿನ ತಾಪ ಹಾಗೂ ಆರ್ದ್ರತೆ ಅಂದರೆ, ಅತ್ಯಂತ ಕಡಿಮೆ ೭ಡಿಗ್ರಿ ಫಾರೆನ್ಹೈಟ್ ರಿಂದ ೧೦೫ ಡಿಗ್ರಿ ಫಾರೆನ್ಹೈಟ್ ವರೆಗಿನ ವಿಪರೀತ ವಾತಾವರಣದಲ್ಲಿಯೂ ಹೊಂದಿಕೊಳ್ಳಬಲ್ಲವು. ಇದು ಅವುಗಳಿಗೆ ಪರಿಸರದ ಕೊಡುಗೆ. ಈ ದನಗಳ ಮೈಮೇಲಿನ ಬೆವರಿನ ಗ್ರಂಥಿಗಳು ಸಮೃದ್ಧವಾಗಿ ಬೆಳೆದಿರುವುದರಿಂದ ಅವು ಶಾಖವನ್ನು ಬೆವರಿನ ಮೂಲಕ ನಿಯಂತ್ರಿಸಿಕೊಳ್ಳಬಲ್ಲವು. ಈ ಸೌಲಭ್ಯ ಯುರೋಪಿನ ದನಗಳಲ್ಲಿ ಅಷ್ಟೊಂದು ಸಮರ್ಪಕವಾಗಿಲ್ಲ.

ಈ ಬ್ರಹ್ಮನ್ ತಳಿಗಳ ಚರ್ಮದಲ್ಲಿರುವ "ಸಬೇಸಿಯಸ್" ಗ್ರಂಥಿಗಳು ಒಂದು ತರಹದ ವಾಸನೆಯಿಂದ ಕೂಡಿದ ವಸ್ತುಗಳನ್ನು ಸ್ರವಿಸುತ್ತವೆ. ಇದರ ವಾಸನೆಯನ್ನು ಸಹಿಸಲಾರದೇ ನೊಣ, ಸೊಳ್ಳೆಗಳು ಓಡಿ ಹೋಗುತ್ತವೆ. ಈ ದನಗಳು ಹುಲ್ಲುಗಾವಲುಗಳಲ್ಲಿ ಮೇಯುವಾಗ ಪರೋಪಜೀವಿಗಳು ಮೈಮೇಲೆ ಕುಳಿತು ಕಚ್ಚಲು ಪ್ರಾರಂಭಿಸಿದಾಗ ಇವುಗಳ ಕಾಟ ತಾಳಲಾರದೇ ದನಗಳು ತಮ್ಮ ಚರ್ಮವನ್ನು ನಡುಗಿಸುತ್ತವೆ. ಹೀಗೆ ನೂರಾರು ವರ್ಷಗಳಿಂದ ಮೈ ಕಂಪಿಸುವ ಪರಿಪಾಠ ಈ ದನಗಳಿಗೆ ನಡೆದು ಬಂದಿದೆ. ಇದರ ಪರಿಣಾಮವಾಗಿ ಈ ದನಗಳ ಶರೀರದ ಧರ್ಮ, ಹೊದಿಕೆ ಹಾಗೂ ಕೊಬ್ಬುಗಳ ನಡುವೆ ಒಂದು ಸ್ನಾಯು ಪೊರೆ ಬೆಳೆದಿದೆ. ಇದನ್ನು "ಪೆನಿಕ್ಯುಲರ್ ಮೆಂಬ್ರೇನ್" ಎನ್ನುತ್ತಾರೆ. ಈ ಸೌಲಭ್ಯ ಅಮೇರಿಕನ್ ಮೂಲದ ದನಗಳಲ್ಲಿ ಕಂಡು ಬರುವುದಿಲ್ಲ.

**ತಳಿಯ ವಿಶೇಷತೆ**

ವಾತಾವರಣದಲ್ಲಿ ಅತ್ಯಂತ ವೈಪರೀತ್ಯ ಕಂಡು ಬರುವ ಅಮೇರಿಕಾ ದೇಶದ ದಕ್ಷಿಣ ಕರಾವಳಿ ಪ್ರದೇಶದಲ್ಲಿ ತಳಿ ಹೆಚ್ಚು ಉಪಯುಕ್ತವೆಂದು ತಿಳಿದು ಬಂದಿದೆ.

ಪರೋಪಜೀವಿಗಳಿಂದ ರಕ್ಷಿಸಿಕೊಳ್ಳಬಲ್ಲ ಈ ತಳಿಗಳು ಪ್ರಬಲ ರೋಗ ಪ್ರತಿಬಂಧಕ ಶಕ್ತಿಯನ್ನೂ ಹೊಂದಿವೆ. ಆಕಳುಗಳು ಉತ್ತಮ ತಾಯಿಗಳಾಗಿ ಕರುಗಳನ್ನು ಅಕ್ಕರೆಯಿಂದ ಸಲಹುತ್ತವೆ ಮತ್ತು ಅಲ್ಪ ಪ್ರಮಾಣದ ಹಾಲನ್ನೂ ನೀಡುತ್ತವೆ. ಬೇಗನೆ ಪ್ರತಿಕೂಲ ಹವಾಮಾನಕ್ಕೂ ಹೊಂದಿಕೊಳ್ಳುವುದು ಈ ದನಗಳ ಮತ್ತೊಂದು ವಿಶೇಷ. ಈ ದನಗಳಲ್ಲಿ ಈವರೆಗೂ ಕಣ್ಣಿನ ಕ್ಯಾನ್ಸರ್ ಕಂಡು ಬಂದಿಲ್ಲ. ಈ ದನಗಳಲ್ಲಿ ತಿಂದ ಮೇವು ಮತ್ತು ಆಹಾರವನ್ನು ಮಾಂಸವನ್ನಾಗಿ ಪರಿವರ್ತಿಸುವ ಶಕ್ತಿ ಅದ್ಭುತವಾಗಿದೆ. ಈ ದನಗಳು ಬಿಸಿಲಿನಲ್ಲಿ ಆಯಾಸವಿಲ್ಲದೆ ಬಹಳ ಕಾಲದವರೆಗೆ ತಿರುಗಾಡಬಲ್ಲವು. ಇವುಗಳ ಮಾಂಸದಲ್ಲಿ "ಕೊಲೆಸ್ಟ್ರಾಲ್" ಪ್ರಮಾಣ ಅತ್ಯಂತ ಕಡಿಮೆ ಮಟ್ಟದಲ್ಲಿರುವುದರಿಂದ ಹೆಚ್ಚು ಜನಪ್ರಿಯತೆಯನ್ನು ಗಳಿಸಿ, ಅಮೇರಿಕಾ ಒಂದರಲ್ಲಿಯೇ ಇವುಗಳ ಸಂಖ್ಯೆ ೧೫.೫ ಮಿಲಿಯನ್ ಇದೆ ಎಂದು ಇತ್ತೀಚಿನ ವರದಿಗಳಿಂದ ತಿಳಿದು ಬಂದಿದೆ. ಆದ್ದರಿಂದ ಈ ತಳಿ ಅಮೇರಿಕಾ ಅಲ್ಲದೇ ಹಲವು ಪಾಶ್ಚಾತ್ಯ ದೇಶಗಳಲ್ಲಿ ಅತ್ಯುತ್ತಮ ಉಪಯುಕ್ತ ತಳಿಯಾಗಿ ಪ್ರಸಿದ್ಧಿಯಾಗಿದೆ.

**–ಡಾ. ನಾಗರಾಜ್ ಕೆ.ಎಂ., ತಾಳಗುಪ್ಪ**

(ಕೃಪೆ: ಧರ್ಮಭಾರತೀ)

## ಗೋ ಚಾಲಿತ ಲ್ಯಾಪ್‌ಟಾಪ್

ಪ್ರಪಂಚದ ಪ್ರತಿ ಮಗುವಿಗೂ ಒಂದು ಲ್ಯಾಪ್‌ಟಾಪ್ ಕೊಡುವ ಉದ್ದೇಶವನ್ನು ಉಳ್ಳ ಒಂದು ಸರಕಾರೇತರ ಸಂಸ್ಥೆಯ ಹೆಸರು ಕೆಲವರಾದರೂ ಕೇಳಿರಬಹುದು. ಈ ಯೋಜನೆಯನ್ನು ಇಂಗ್ಲೀಷಿನಲ್ಲಿ OLPC ಅಂದರೆ One Laptop Per Child ಎಂದು ಕರೆಯುತ್ತಾರೆ. ಈ ಯೋಜನೆಯ ಬಗ್ಗೆ ಸಮಗ್ರ ಮಾಹಿತಿಯನ್ನು www.laptop.org ತಾಣದಿಂದ ಪಡೆದುಕೊಳ್ಳಬಹುದು. ನೂರು ಡಾಲರ್‌ಗೆ, ಅಂದರೆ ಸುಮಾರು ನಾಲ್ಕು ಸಾವಿರ ರೂ.ಗಳಿಗೆ ಒಂದು ಲ್ಯಾಪ್‌ಟಾಪ್ ದೊರೆಯುವಂತೆ ಮಾಡುವುದು ಈ ಯೋಜನೆಯು ರೂವಾರಿ ನಿಕೊಲಾಸ್ ನೆಗ್ರೊಪಂಟೆಯವರ ಉದ್ದೇಶ. ಈ ಯೋಜನೆ ಮುಖ್ಯವಾಗಿ ತೃತೀಯ ದೇಶದ ಮಕ್ಕಳನ್ನು ಗುರಿಯಾಗಿಟ್ಟುಕೊಂಡಿದೆ. ಈ ಪಟ್ಟಿಯಲ್ಲಿ ಭಾರತವೂ ಸೇರಿದೆ. ನಮ್ಮ ದೇಶದಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಕಡಿಮೆ ಬೆಲೆಯಲ್ಲಿ ಲ್ಯಾಪ್‌ಟಾಪ್ ದೊರೆಯುವಂತೆ ಮಾಡಿದರೆ ಸಾಲದು. ವಿದ್ಯುತ್ ಇಲ್ಲದ ಹಳ್ಳಿಗಳಲ್ಲಿ ಅವುಗಳನ್ನು ಚಲಾಯಿಸುವುದು ಹೇಗೆ? ಅದಕ್ಕಾಗಿ ಗೋ ಚಾಲಿತ ಡೈನಾಮೋವನ್ನು ತಯಾರಿಸುತ್ತಿದ್ದಾರೆ. ಮುಂಬಯಿ ಪಕ್ಕದ ಒಂದು ಹಳ್ಳಿಯಲ್ಲಿ ಅರ್ಜುನ್ ಸರ್ವಾಲ್ ಎಂಬವರು ಈ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಹಳೆಯ ಫಿಯಟ್ ಕಾರಿನಿಂದ ತೆಗೆದ ಡೈನಾಮೋವನ್ನು ಬೆಲ್ಟ್ ಮತ್ತು ಪುಲ್ಲಿಗಳ ಮೂಲಕ ಚಲಾಯಿಸಿ ವಿದ್ಯುತ್ ಪಡೆದು ಲ್ಯಾಪ್‌ಟಾಪ್ ನಡೆಸುವ ಪ್ರಯತ್ನದಲ್ಲಿ ಅರ್ಜುನ್ ನಿರತರಾಗಿದ್ದಾರೆ.



**ಮಾಸದ ಗೋವು**

## ಅಮೃತಮಹಲ್ – ಒಂದು ಖಾಸಾ ಅನುಭವ

ಕೆಲವು ಖಾಸ್ ನೆನಪುಗಳೊಂದಿಗೆ ಈ ಬಾರಿ ನಾನು ಹೇಳಹೊರಟಿರುವುದು ನಮ್ಮದೇ ನೆಲದ ತಳಿ 'ಅಮೃತಮಹಲ್' ಬಗ್ಗೆ.

ಕೊಟ್ಟಿಗೆಯ ಸುತ್ತ ಇರುವ ನನ್ನ ಈ ಖಾಸ್ ನೆನಪುಗಳು ನನ್ನ ಬಾಲ್ಯದ ಒಡನಾಡಿಗಳಾಗಿದ್ದ ಅಮೃತಮಹಲ್ ತಳಿಯ ಬಾವ, ಗಿಡ್ಡೀರ. ಇವುಗಳಲ್ಲಿ ಆರೋಪಿತವಾಗಿದ್ದ ರಮ್ಯ ವ್ಯಕ್ತಿತ್ವದ ಕುರಿತಾದದ್ದು, ಅವುಗಳಿಗೂ ಮನುಷ್ಯರಿಗೂ ಬೆಸೆಸಿದ್ದ ಭಾವನಾತ್ಮಕ ಸಂಬಂದಗಳನ್ನು ನೆನಪಿಸುವಂತದ್ದು. ಅಲ್ಲದೆ ಆಧುನಿಕ ಜಗತ್ತಿನ ಯಾವ ಸೌಕರ್ಯಗಳಿಲ್ಲದೆಯೂ ಪಶುಗಳೊಂದಿಗೆ ಕೂಡ ಆ ದಿನಗಳಲ್ಲಿ ಜನ ಹೊಂದಿರುತ್ತಿದ್ದ ಆಪ್ತಭಾವವನ್ನು ನಮಗೆ ಎಲ್ಲ ಸುಖೋಪಭೋಗಗಳನ್ನು ಪಡೆದೂ ಹೊಂದಲಾಗುತ್ತಿಲ್ಲವೆಂಬ ಮನದಾಳದ ಹಳಹಳಿಕೆಯನ್ನು ನಿಮ್ಮ ಮುಂದೆ ಹಂಚಿಕೊಳ್ಳಲು ಉತ್ತೇಜಿಸುವಂತದ್ದು.

ಬಾವ ನಮ್ಮ ಮನೆಯ ಅಮೃತಮಹಲ್ ತಳಿಯ ಗಾಡಿ ಎತ್ತು. ಅದರ ಬುದ್ದಿಮತ್ತೆ, ಕಷ್ಟಸಹಿಷ್ಣುತೆಗಳು ಅದನ್ನು ನಮ್ಮ ಮನೆಯವರೆಲ್ಲರ ಅಚ್ಚುಮೆಚ್ಚಾಗಿಸಿದ್ದವು. ಅದಕ್ಕೆ ಅಪರಿಚಿತರೆಂದರೆ ಬಹಳ ಅಲರ್ಜಿ. ಆದರೆ ಪರಮ ಸ್ವಾಮಿನಿಷ್ಟ. ನಾನು ಅದೆಷ್ಟೋ ಬಾರಿ ವಾರಿಗೆಯ ಹುಡುಗರೊಂದಿಗೆ ಜಗಳವಾದಾಗ ಅದರ ಬೆಂಗಡೆ ಹೊಗಿ ಅಡಗಿ ನಿಲ್ಲುತ್ತಿದ್ದದುಂಟು. ಹುಡುಕಿ ಬಂದ ಅವರು ದೂರದಿಂದ ಅವಾಜ್ ಹಾಕುತ್ತಿದ್ದರಾದರೂ ಬಾವನ ರಕ್ಷಣೆಯಲ್ಲಿದ್ದ ನನ್ನ ಮೈ ಮುಟ್ಟುವ ಸಾಹಸಕ್ಕಿಳಿಯುತ್ತಿರಲಿಲ್ಲ. ಹುಡುಗರಿರಲಿ ದೊಡ್ಡವರೂ ಬಾವನನ್ನು ಕಟ್ಟಿಹಾಕಿದ್ದುದನ್ನು ಹಣುಕಿ ಪರಿಶೀಲಿಸದೆ ಕೊಟ್ಟಿಗೆಗೆ ಕಾಲಿಕ್ಕುವಂತಿರಲಿಲ್ಲ. ಹಾಗಿತ್ತು ಬಾವನ ಖದರ್! ಪ್ರಚಂಡ ಬುದ್ದಿಮತ್ತೆಯ ಕಾರಣದಿಂದ ಬಾವನಿಗೆ ಊರಿನಲ್ಲಿ ಅದುವರೆಗೂ ತಕ್ಕಮಟ್ಟಿನ ಗೌರವ, ಪ್ರತಿಷ್ಟೆಗಳು ಸಲ್ಲುತ್ತಿದ್ದವಾದರೂ ಅದರ ಕೀರ್ತಿ ಆಚಂದ್ರಾರ್ಕಸ್ಥಾಯಿಯಾದದ್ದು ಅದು ಸಗಣಿ ತೆಗೆಯಲು ಬರುತ್ತಿದ್ದ ಹುಡುಗಿಯ ಮೇಲೆ ಹಗೆ ತಿರಿಸಿಕೊಂಡ ಘಟನೆಯ ನಂತರ.



**ಅಮೃತಮಹಲ್, ಕರ್ನಾಟಕ**

ಮಲೆನಾಡಿನಲ್ಲಿ ಸಗಣಿ ತೆಗೆಯಲು ಬರುವ ಹರಿಜನ ಹೆಣ್ಣುಗಳಿಗೆ ಎಲ್ಲ ವಯೋಮಾನದವರಿಗೂ ಹುಡುಗಿ ಅಂತಲೆ ಕರೆಯುವುದು ರೂಡಿ. ಹಾಗೇ ಗಂಡುಗಳೆಲ್ಲ ಸಾಯುವವರೆಗೂ ಹುಡುಗರೆ! ಸಾರಾಯಿಯಿಂದಲೂ, ವಿಚಿತ್ರ ಖಾಯಿಲೆಗಳಿಂದಲೂ ಹಾಗೂ ಸುತ್ತಮುತ್ತಲಿನ ಭೂತಪ್ಪಗಳ ಅಕಾರಣ ಶಾಪದಿಂದಲೂ (!) ಮಧ್ಯವಯಸ್ಸಿಗೇ ಮುದುಕರಂತಾಗುತಿದ್ದರಾದರೂ ಬ್ರಾಹ್ಮಣರ ಬಾಯಿಯಲ್ಲಿ ಮಾತ್ರ ಅವರಿಗೆ ಹುಡುಗ ಎಂಬ 'ಚಿರಯೌವ್ವನ' ಪಟ್ಟ. ಆದರೆ ಈಗ ಅವರ ಮಕ್ಕಳೆಲ್ಲ ಬೆಂಗಳೂರಿನ ಬಾರು, ಪಬ್ಬುಗಳಲ್ಲಿ ಉನ್ನತ ಹುದ್ದೆಗಳನ್ನಲಂಕರಿಸಿ ಈ ದೊಡ್ಡ ಊರಿನಲ್ಲಿ ನಮ್ಮನ್ಯಾರು ಗುರುತು ಹಿಡಿದಾರೆಂದು ಸಿಗ್ಗಿಲ್ಲದೆ ಬಾರಿಗೆ ನುಗ್ಗುವ ಹೆಗಡೆಯವರ ಮಕ್ಕಳಿಗೆ ಸಿಕ್ಕು, ಮಾತಾಡಿಸಿ ಉಪಚಾರ ಮಾಡಿಬಿಡುವುದರಿಂದ ತಮ್ಮ ಗುಟ್ಟೆಲ್ಲಿ ಬಹಿರಂಗವಾಗುತ್ತದೆಯೊ ಎಂದು ಅವರನ್ನು 'ಹುಡುಗಾ' ಎಂದು ಕರೆಯುವ ಧೈರ್ಯ ಈಗ ಯಾರೂ ಮಾಡುವುದಿಲ್ಲ.

ಇಂತಿಪ್ಪ ಹುಡುಗಿ ನಾಲ್ಕು ಮನೆ ಕೆಲಸ ಮುಗಿಸಿ ನಂತರ ನಮ್ಮ ಮನೆಗೆ ಬರುತ್ತಿದ್ದುದರಿಂದ, ಅವಳಲ್ಲಿ ಬಾವನ ವಜನಿಗೆ ತಕ್ಕ ನಡವಳಿಕೆ ಪ್ರದರ್ಷಿಸುವ ತಾಳ್ಮೆ ಇರುತ್ತಿರಲಿಲ್ಲವಾಗಿ ಭಾವನಿಗೆ ಕೈಯ್ಯಲ್ಲಿನ ಹಿಡಿಯಿಂದಲೆ ಆಗೀಗ 'ಹುಲಿಹಿಡಿಯ' ಇತ್ಯಾದಿ ಮಂತ್ರಸಹಿತ ಪೂಜೆಯಾಗುತ್ತಿತ್ತು. ಆಕೆಯ ಈ ಹೊಡೆತಗಳೆಲ್ಲ ಅಕ್ಷಮ್ಯವೆಂದು ಬಾವ ಪರಿಗಣಿಸಿರಬಹುದೆಂಬುದು ಅವಳ ಅರಿವಿಗೆ ಮೀರಿದುದಾಗಿತ್ತು.

ವೈಶಾಖದಲ್ಲಿ ಒಂದು ದಿನ ಹುಡುಗಿಯ ಮಗಳು ಪುಟ್ಟಿ (ಅವಳಿನ್ನೂ ಸಗಣಿ ತೆಗೆಯುವ ಕೆಲಸ ಪ್ರಾರಂಭ ಮಾಡಿಲ್ಲದರಿಂದ ಅವಳಿಗಿನ್ನೂ 'ಹುಡುಗಿ' ಪಟ್ಟ ಪ್ರಾಪ್ತವಾಗಿರಲಿಲ್ಲ) ಕೊಟ್ಟಿಗೆ ಬಳಿ ನಿಂತು ಮೇಲಿನ ಸಪ್ತಕದಲ್ಲಿ ಕೂಗಿಕೊಂಡಿದ್ದು ಕೇಳಿ ಎಲ್ಲೊ ಬೆಂಕಿ ಬಿದ್ದಿರಬೇಕೆಂದು ಗಡಬಡಿಸಿ ಹೊರಬಂದೆವು. 'ಬಾವ ಸೀರೆ ಎಳದಿತ್ತ್' ಎಂದು ಶೆಟ್ಟಿ ಹುಡುಗಿಯರ ಗೆಳೆತನದ ಪ್ರಭಾವದಿಂದ ಆಕೆ ಅರ್ಧ ತನ್ನ ಭಾಷೆಯಲ್ಲೂ ಅರ್ಧ ಶೆಟ್ಟಿ ಭಾಷೆಯಲ್ಲೂ ಹೇಳಿದ್ದರಿಂದ, ಅವಳ ಮಾವನೊ ಬಾವನೊ ಕುಶಾಲಿಗೆ ಸೀರೆ ಎಳೆದಿದ್ದನ್ನೆ ಇಲ್ಲಿ ಬಂದು ಹೇಳುತ್ತಿದ್ದಾಳೆಂದು ಭಾವಿಸಿ, ಅಜ್ಜ 'ಅದಕ್ಕೇಂತಕ್ಕೆ ಹಂಗೆ ಕೂಕ್ಯತ್ತಿಯೆ, ನಿಮ್ಮ ಅವ್ವಂಗೆ ಹೇಳ್ತಿನಿ ತಗ' ಎಂದು ಸಭೆಯನ್ನು ಬರಕಾಸ್ತು ಮಾಡಲನುವಾದರು. ಅವಳಿಗೆ ಇವರೇನು ಊಹಿಸಿಕೊಂಡರೆಂದು ಹೊಳೆದು 'ಅಯ್ಯ.. ನನ್ನ ಬಾವಲ್ರಾ, ನಿಮ್ಮನೆ ಎತ್ತು; ಬಾವ ಸೀರೆ ಎಳ್ದಿದ್ದು' ಎಂದು ಕೊಂಚ ನಾಚಿಕೊಂಡಂತೆ ಹೇಳಿದಾಗಲೆ ತಿಳಿದದ್ದು ನಮಗೆ ಇದು ಬುಡಕ್ಕೆ ಬಂದಿದೆಯೆಂದು.

ಒಟ್ಟಿನಲ್ಲಿ ಅವಳು ಹೇಳಿದ ಸಾರಾಂಶವಿಷ್ಟು.

ಆಕೆಯೂ ಅವರಮ್ಮನೂ ಕೆಲಸ ಮುಗಿಸಿ ಬೇಶ್ವಾರ (ಗುರುವಾರ) ವಾದ್ದರಿಂದ ಸ್ನಾನ ಮಾಡಲು ಊರ ಕೆರೆಗೆ ತೆರಳಿದ್ದರೆಂದೂ ಅಲ್ಲಿ ಸ್ನಾನ ಮುಗಿಸಿ ಸೀರೆ ತೊಳೆದು ಬಿದುರು ಮಟ್ಟಿಯಲ್ಲಿ ಒಣಗಿಸಿ ಅದು ಒಣಗಲು ಕಾಯುತ್ತ ಅಲ್ಲೆ ಅಡ್ಡಾದರೆಂದೂ ಬಿಸಿಲಿಗೆ ಹತ್ತಿದ ಜೋಂಪಿಂದ ಎಚ್ಚರಾದಾಗ ನೋಡಿದರೆ ಸೀರೆ ಬಾವನ ಬಾಯಲ್ಲಿತ್ತೆಂಬುದು ಒಟ್ಟು ವೃತ್ತಾಂತ. ಅಲ್ಲೇ ಮೇಲೆ ಅನತಿದೂರದ ಬೇಣದಲ್ಲಿ ಮೇಯುತ್ತಿದ್ದ ಬಾವ, ಒಣಗಿಸಿದ ಸೀರೆಯ ಪಕ್ಕದಲ್ಲೇ ಇವರು ಮಲಗಿದ್ದರೂ ಐಬು ಹತ್ತದಂತೆ ಕೆಲಸ ಸಾಧಿಸಿತ್ತು. ಸೀರೆ ಬಾಯಲ್ಲಿ ಕಚ್ಚಿಕೊಂಡು ಇವರಿಗೆ ಹೂಂಕರಿಸಿ ಅಣಕಿಸಿದ್ದು ಸೇಡು ತೀರಿಸಿಕೊಳ್ಳುವುದಕ್ಕಾಗೆ ಮಾಡಿದ್ದು ಎಂದು ಅದಾಗಲೆ ಸೇರಿದ್ದ ಊರಿನ ಹತ್ತು ಸಮಸ್ತರು ಒಮ್ಮತದಿಂದ ತಿರ್ಮಾನಿಸಿದರು. ಪುಟ್ಟಿ, ಅವರ ಅವ್ವ ಅಲ್ಲೇ ಬಿದಿರು ಮೆಳೆಯಲ್ಲಿ ಸೀರೆಯಿಲ್ಲದೆ ಇನ್ನೂ ನಿಂತಿದ್ದಳೆಂದು ತಿಳಿಸಿ ಬಾವನಿಗೆ ಶಾಪ ಹಾಕತೊಡಗಿ ಹನಿಗಣ್ಣಾದಳು. ಅಜ್ಜ ಕಿರುನಗುತ್ತ ದ್ರೌಪದಿ ವಸ್ತ್ರಾಪಹರಣದ ಶ್ರೀಕೃಷ್ಣನಂತೆ ಅಭಯ ನೀಡಿ ಅಜ್ಜಿಯ ಹಳೆಯ ಸೀರೆಯೊಂದನ್ನು ಕೊಟ್ಟು ಕಳಿಸಿದರು. ಈ ಘಟನೆಯಿಂದ ಮನೆಯಲ್ಲೂ, ಊರಲ್ಲೂ ಬಾವನಿಗೆ ಹೆಚ್ಚಿನ ಗೌರವಗಳು ಪಾತ್ರವಾದರೂ ಅದರ ಆಜನ್ಮ ವೈರಿ ಹೂಬಾಲಿಯಲ್ಲಿ (ಮತ್ತೊಂದು ದನ) ಯಾವ ಬದಲಾವಣೆಯನ್ನೂ ತಾರದೆ ಕಣ್ಣಿ ಬಿಚ್ಚಿದ ಕೂಡಲೆ ಬಾವನಿಗೆ ಹಾಯುವ ತನ್ನ ಚಾಳಿಯನ್ನು ಮುಂದುವರೆಸಿತು.

ಬಾವನ ಕುರಿತಾಗಿ ಇನ್ನೂ ಹತ್ತು ಹಲವು ದಂತಕತೆಗಳು ಪ್ರಚಲಿತವಿದ್ದವು. ಇದರ ಮಹೊನ್ನತ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ನಮ್ಮನೆಯ ದತ್ತ ಕಕ್ಕನೂ, ವಿಶ್ವ ಕಕ್ಕನೂ 'ಬಾವರು ದೇವರು, ಶೂರರು ಧೀರರು, ಸರ್ವಶಕ್ತರು' ಎಂದು ಪದ್ಯವೊಂದನ್ನೆ ರಚಿಸಿಬಿಟ್ಟಿದ್ದರು. ಆಶ್ಚರ್ಯವೆಂದರೆ ಆ ಹಾಡು ಯಾರೇ, ಯಾವ ರಾಗದಲ್ಲೆ ಹಾಡಿದರೂ ಅದಕ್ಕೆ ತನ್ನನ್ನೆ ಸ್ತುತಿಸುತ್ತಿದ್ದಾರೆಂದು ತಿಳಿದುಹೋಗಿ ಅದು ನಾಚಿಕೊಳ್ಳುತ್ತಿತ್ತು. ಕುತ್ತಿಗೆ ಕೊಂಕಿಸಿ, ಗೋಡೆಯ ಬದಿ ಮುಖ ಮಾಡಿ, ಮುಂಗಾಲನ್ನು ಎತ್ತಿ ಎತ್ತಿ ಹಾಕುತಿತ್ತು! ಇದರ ಗೆಳೆಯ ಹಾಗೂ ಗಾಡಿ ಎಳುಯುವುದರಲ್ಲಿ ಸಹೋದ್ಯೋಗಿ ಗಿಡ್ಡೀರನಿಗೆ ಈ ರೀತಿಯ ಕೀರ್ತಿ ಪತಾಕೆಯಿಲ್ಲದಿದ್ದರೂ ದೀಪಾವಳಿಯ ಬಾಸಿಂಗ ಅದಕ್ಕೆ ತುಂಬಾ ಚೆನ್ನಾಗಿ ಒಪ್ಪುತ್ತಿತ್ತು. ಅದು ಬಾಸಿಂಗ ಕಟ್ಟಿ ಓಡಿಸಲು ಬರುವ ಹುಡುಗರನ್ನು ಹಾಯಲು ಹೋಗಿ ಹೆದರಿಸದೆ ಬಾವನಿಗಿಂತ ಹೆಚ್ಚು ಯುವಜನಪ್ರೀತಿಗೆ ಪಾತ್ರವಾಗಿತ್ತು. ಬಾವ ತೀರಿಕೊಂಡ ದಿನ ನಮ್ಮ ಮನೆಯಲ್ಲಿ ಯಾರೂ ಊಟ ಮಾಡಿರಲಿಲ್ಲ.

ಈ ತಳಿಯ ಪೂರ್ಣ ವಿವರಗಳಿಗಾಗಿ ರಾಮಚಂದ್ರಾಪುರ ಮಠದ ಗೋಸೇವಾ ಕಾರ್ಯಕರ್ತ ಸದಾಶಿವ ಮೋಂತಿಮಾರ್ ಅವರ ಲೇಖನ ಲಗತ್ತಿಸಿದ್ದೇನೆ. ಓದಿಕೊಳ್ಳಿ.

**-ಮಧುಕೇಶ ದೊಡ್ಡೇರಿ**

## ಅಮೃತಮಹಲ್

ಭಾರತದ ಗೋ ತಳಿಗಳಲ್ಲಿರುವ ಮೂರು ವಿಭಾಗಗಳಲ್ಲಿ ಇವುಗಳು 'ಕೆಲಸಗಾರ ತಳಿ' ವರ್ಗಕ್ಕೆ ಸೇರಿದವುಗಳಾಗಿವೆ. ಮೂಲತಃ ಕರ್ನಾಟಕದ ಹಾಸನ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಯವುಗಳಾದ ಇವುಗಳನ್ನು ವಿಶೇಷವಾಗಿ ಮೈಸೂರು ಅರಸರು ೧೫೭೨ ರಿಂದ ೧೬೩೬ರ ಕಾಲಘಟ್ಟದಲ್ಲಿ ಅಭಿವೃದ್ಧಿಗೊಳಿಸಿದರು. ಯುದ್ಧಗಳ ಸಂದರ್ಭದಲ್ಲಿ ಸಾಮಾನು ಸರಂಜಾಮುಗಳ ಸಾಗಾಟಕ್ಕಾಗಿ ಈ ತಳಿಯ ಅಭಿವೃದ್ಧಿಯಾಯಿತು ಮಾತ್ರವಲ್ಲ ತೋಟಗಳಲ್ಲಿ ಇವು ಇಂದಿಗೂ ಕಾವಲು ನಾಯಿಯ ಕೆಲಸವನ್ನು ಮಾಡುತ್ತಿವೆ. ಸಾಕಿದ ಒಡೆಯನಿಗೆ ಅತ್ಯಂತ ನಿಷ್ಠೆಯನ್ನು ತೋರಿಸುವ ಅಮೃತಮಹಲ್ ತಳಿಗಳು ತಮ್ಮ ಒಡೆಯನಿಗಾಗಿ ಯಾವುದೇ ಕೆಲಸವನ್ನು ಮಾಡಿಕೊಡಲು ಸಿದ್ಧವಾಗಿರುತ್ತವೆ. ಮೈಸೂರು ಅರಸರ ಕಾಲದಲ್ಲಿ ಇವು 'ಬೆಣ್ಣೆ ಚಾವಡಿ' ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿದ್ದುವು. ಮುಂದೆ ಹೈದರಾಲಿಯ ಮಗ ಟಿಪ್ಪೂಸುಲ್ತಾನನು ಹಳೇ ಮೈಸೂರು ಪ್ರದೇಶದಲ್ಲಿ ಇವುಗಳನ್ನು ಬೆಳೆಸಿ 'ಅಮೃತಮಹಲ್' ಎನ್ನುವ ನಾಮಕರಣ ಕೂಡ ಮಾಡಿದನು. ಟಿಪ್ಪುವಿನ ದಿವಾನನಾಗಿದ್ದ 'ಪೂರ್ಣಯ್ಯ'ನು ಈ ಅಮೃತಮಹಲ್ ತಳಿಗಳನ್ನು ತಮಿಳುನಾಡಿನಲ್ಲಿ ಬೆಳೆಸಿದನು. ಇಂದಿಗೂ ತಮಿಳುನಾಡಿನ ಕೆಲಭಾಗಗಳಲ್ಲಿ ಅಮೃತಮಹಲ್ ತಳಿಯ ದನ ಕರುಗಳನ್ನು 'ಪೂರ್ಣಯ್ಯನ ದನ'ಗಳೆಂದೇ ಕರೆಯುತ್ತಾರೆ. ಮೈಸೂರು ಅರಸರ ಹಾಗು ಹೈದರಾಲಿ, ಟಿಪ್ಪುವಿನ ಸೈನ್ಯದಲ್ಲಿ ಈ ತಳಿಗಳ 'ಬಂಜಾರ'ವೆಂಬ ದಳ ಪ್ರಮುಖವಾಗಿತ್ತು.

ಕೇವಲ ೨೩೭ ಅಮೃತಮಹಲ್ ತಳಿಯ ಎತ್ತುಗಳು ೩೦೦೦೦ದಷ್ಟಿದ್ದ ಹೈದರಾಬಾದ್ ನಿಜಾಮನ ಸೈನ್ಯವನ್ನು ಸೋಲಿಸಿ ಓಡಿಸಿರುವುದು ಇಂದು ಇತಿಹಾಸ ಹಾಗೂ ಅವುಗಳ ಸಾಮರ್ಥ್ಯವನ್ನು ತೋರಿಸಿಕೊಡುತ್ತದೆ. ಮೊದಲ ಹಾಗೂ ದ್ವಿತೀಯ ಮಹಾಯುದ್ಧಗಳಲ್ಲಿ ಯುದ್ಧ ಪರಿಕರಗಳನ್ನು ಸಾಗಿಸಲು ಈ ತಳಿಯ ಎತ್ತುಗಳು ಉಪಕರಿಸಿದ್ದವು ಎನ್ನುವುದನ್ನು ವಿಶ್ವ ಯುದ್ಧದ ಇತಿಹಾಸ ಹೇಳುತ್ತದೆ.

ಗಂಟೆಗಳ ಕಾಲ ಆಹಾರ, ನೀರು ಸೇವಿಸದೇ ಸಾಮಾನು ಸಾಗಿಸುವುದು ಈ ತಳಿಗಳಲ್ಲಿ ಕಂಡುಬರುತ್ತದೆ. ಹಾಲು ವಿಶೇಷವಾಗಿ ನೀಡದಿದ್ದರೂ ಆಕಳುಗಳು ಶ್ರಮದ ಕೆಲಸಕ್ಕೆ ಉಪಯೋಗವಾಗುತ್ತವೆ. ಹಾಸನ, ದಕ್ಷಿಣ ಕನ್ನಡದ ಕೆಲವು ಭಾಗ, ಚಿಕ್ಕಮಗಳೂರು, ಹಳೇ ಮೈಸೂರು ಪ್ರದೇಶ, ಮಂಡ್ಯ ಮೊದಲಾದೆಡೆ ಈ ತಳಿಯ ಸಂವರ್ಧನೆಗಾಗಿ 'ಅಮೃತಮಹಲ್ ಕಾವಲು ಭೂಮಿ' ಬಿಟ್ಟಂತಹ ಉದಾಹರಣೆಗಳು ನೋಡಲು ಸಿಗುತ್ತವೆ. ಆದರಿಂದು ನಮ್ಮ ಅವಗಣನೆಯಿಂದಾಗಿ ಆ ಕಾವಲು ಭೂಮಿಗಳು ಅತಿಕ್ರಮಣವಾಗುತ್ತಿವೆ. ಒಳ್ಳೆಯ ತಳಿಗಳು ಕೂಡ ಅಂತ್ಯವಾಗುವ ನಿಟ್ಟಿನಲ್ಲಿವೆ.

ಈಗಲಾದರೂ ಅಮೃತಮಹಲ್ ತಳಿಗಳನ್ನು ವ್ಯವಸ್ಥಿತವಾಗಿ ಉಪಯೋಗಿಸಿದಲ್ಲಿ ತನ್ಮೂಲಕ ಇಂದಿನ ಬತ್ತುತ್ತಿರುವ ಇಂಧನ ವ್ಯವಸ್ಥೆಗೆ ಹಾಗೂ ಕಾರ್ಮಿಕ ಸಮಸ್ಯೆಗೆ ಪರ್ಯಾಯವಾಗಬಹುದು.

**- ಸದಾಶಿವ ಮೋಂತಿಮಾರ್**

# ಸೆಗಣಿಯಿಂದ ಅನಿಲೋತ್ಪಾದನೆ


ಗೋವು ಕಾಮಧೇನುವಾಗಿ ತನ್ನ ಹುಟ್ಟಿನಿಂದ ಸಾವಿನವರೆಗೂ ಜೀವಸಂಕುಲದ ಆವಶ್ಯಕತೆಗಳನ್ನು ನಿಃಸ್ವಾರ್ಥದಿಂದ ಪೂರೈಸುತ್ತದೆ. ಗೋವು ತನ್ನ ದೇಹದ ಕಣಕಣವನ್ನೂ ಪರರ ಉಪಯೋಗಕ್ಕಾಗಿ ಮೀಸಲಿಟ್ಟಿದೆ. 'ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ, ತಟ್ಟದೆ ಹಾಕಿದರೆ ಮೇಲು ಗೊಬ್ಬರವಾದೆ' ಎಂಬ ವಾಕ್ಯದಿಂದಲೇ ನಾವು ಗೋಮಯದ ಪ್ರಾಮುಖ್ಯತೆಯನ್ನು ಅರಿತುಕೊಳ್ಳಬಹುದು.

ಹಿಂದಿನ ಕಾಲದಲ್ಲಿ ಸೆಗಣಿಯಿಂದ ತಯಾರಿಸಿದ 'ಬೆರಣಿ' ಪ್ರಮುಖ ಅಡುಗೆ ಉರುವಲು ಆಗಿತ್ತು. ಇಂದೂ ಕೆಲವು ಹಳ್ಳಿಗಳಲ್ಲಿ ಬೆರಣಿಯನ್ನು ಉರುವಲಾಗಿ ಉಪಯೋಗಿಸುತ್ತಾರೆ. ಆದರೆ ಇದರಿಂದ ಉತ್ಪತ್ತಿಯಾಗುವ ಹೊಗೆಯ ಪ್ರಮಾಣ ಜಾಸ್ತಿ.

ಆದರೆ ಇಂದು ಹೆಚ್ಚಿನ ಮನೆಗಳಲ್ಲಿ ಉಪಯೋಗಿಸುವ ಗೋಬರ್ ಗ್ಯಾಸ್ ಅಪಾಯರಹಿತ, ಮಾಲಿನ್ಯರಹಿತ ಅಡುಗೆ ಅನಿಲ. ಪೆಟ್ರೋಲಿಯಂ ಅಡುಗೆ ಅನಿಲಕ್ಕೆ ಸುರಿಯುವ ಹಣವನ್ನು ಈ ಗೋಬರ್ ಅನಿಲ ಬಹಳಷ್ಟು ಮಟ್ಟಿಗೆ ಉಳಿಸಿದೆ ಎಂದು ನಾನು ಧೈರ್ಯದಿಂದ ಹೇಳಬಲ್ಲೆ. ಇಂದು ಹಳ್ಳಿಗಳಲ್ಲಿ ಅನೇಕರು ಪೆಟ್ರೋಲಿಯಂ ಅಡುಗೆ ಅನಿಲದ ಚಿಂತೆಯಿಲ್ಲದೆ, ನೆಮ್ಮದಿಯಿಂದ ಅಡುಗೆ ಮಾಡಿ ಉಣ್ಣಲು ಕಾರಣ ಈ ಗೋಬರ್ ಅನಿಲ.

ಈಗ ಗೋಬರ್ ಅನಿಲದ ಉತ್ಪಾದನೆಯ ವಿಧಾನವನ್ನು ನೋಡೋಣ. ಈ ಗೋಬರ್ ಅನಿಲದ ಉತ್ಪಾದನಾ ಮೂಲ ಸೆಗಣಿ. ನಡುವಿನಲ್ಲಿ ತೂತು ಇರುವ, ಗೋಬರ್ ಅನಿಲದ ಡ್ರಮ್ ಗೆ ಸೆಗಣಿಯನ್ನು ಪೈಪ್ ಮೂಲಕ ಸಂಬಂಧಹೊಂದಿರುವ, ಟ್ಯಾಂಕ್ ಗೆ ಹಾಕಬೇಕು. ನಂತರ ಸಾಕಷ್ಟು ಪ್ರಮಾಣದಲ್ಲಿ ನೀರು ಹಾಕಿ ಕದಡಬೇಕು. ಇಲ್ಲಿ ನೀರು ಹಾಗೂ ಉಷ್ಣತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಯಾಕೆಂದರೆ ಅವು ಸೂಕ್ಷ್ಮಾಣುಗಳ ಬೆಳವಣಿಗೆಗೆ ಸಹಾಯಕಾರಿ. ಕದಡಿದ ಸೆಗಣಿ ಪೈಪ್ ಮೂಲಕ ಡ್ರಮ್‌ಗೆ ಹೋಗುತ್ತದೆ. ಗೋಬರ್ ಅನಿಲದ ಉತ್ಪಾದನೆ ಡ್ರಮ್‌ನ ಒಳಗೆ ಹಂತಹಂತವಾಗಿ ಆರಂಭವಾಗುತ್ತದೆ. ಮನೆಯಲ್ಲಿ ಉಪಯೋಗಿಸಿ ಹೆಚ್ಚಾಗಿ ಉಳಿದ ಹುಳಿ ಮಜ್ಜಿಗೆಯನ್ನು ಸೆಗಣಿಯನ್ನು ಕದಡುವಾಗ ಎರೆದರೆ ಅನಿಲದ ಉತ್ಪಾದನಾ ಪ್ರಮಾಣ ಹೆಚ್ಚುತ್ತದೆ.

ಗೋಮಯ ಅನೇಕ ಘಟಕಗಳನ್ನು ಹೊಂದಿರುತ್ತದೆ. ಅದರ ಪ್ರಮುಖ ಘಟಕ ಸೆಲ್ಯುಲೋಸ್. ಮೊದಲನೆಯ ಹಂತದಲ್ಲಿ ನೀರು ಸೆಲ್ಯುಲೋಸ್ ನ ದೊಡ್ಡ ದೊಡ್ಡ ಅಣುಗಳನ್ನು ವಿಭಜಿಸಿ, ಸಣ್ಣ–ಸಣ್ಣ ಅಣುಗಳನ್ನಾಗಿ ಪರಿವರ್ತಿಸುತ್ತದೆ. ಎರಡನೆಯ ಹಂತದಲ್ಲಿ ಎಸಿಟಿಕ್ ಆಮ್ಲ ಉತ್ಪತ್ತಿಯಾಗುತ್ತದೆ. ಎಸಿಟೋಬ್ಯಾಕ್ಟೀರಿಯಂ ಎಂಬ ಬ್ಯಾಕ್ಟೀರಿಯಾ, ಮೊದಲನೆಯ ಹಂತದಲ್ಲಿ ವಿಭಜನೆಯಿಂದ ಉತ್ಪತ್ತಿಯಾದ ಸಣ್ಣ–ಸಣ್ಣ ಅಣುಗಳನ್ನು ಉಪಯೋಗಿಸಿಕೊಂಡು, ಎಸಿಟಿಕ್ ಆಮ್ಲವನ್ನು ಉತ್ಪತ್ತಿ ಮಾಡುತ್ತದೆ. ಈ ಎಸಿಟಿಕ್ ಆಮ್ಲ, ಮಿಥೇನ್ ಅನಿಲದ ಉತ್ಪಾದನೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಂತರದ ಹಂತ, ಅಂದರೆ ಮೂರನೆಯ ಹಂತದಲ್ಲಿ ಮಿಥೇನ್ ಅನಿಲ ಉತ್ಪತ್ತಿಯಾಗುತ್ತದೆ. ಮಿಥೆನೋ ಬ್ಯಾಕ್ಟೀರಿಯಂ ಎಂಬ ಬ್ಯಾಕ್ಟೀರಿಯಾ ಎರಡನೆಯ ಹಂತದಲ್ಲಿ ಉತ್ಪತ್ತಿಯಾದ ಎಸಿಟಿಕ್ ಆಮ್ಲವನ್ನು ಉಪಯೋಗಿಸಿಕೊಂಡು ಮಿಥೇನ್ ಅನಿಲವನ್ನು ಉತ್ಪಾದಿಸುತ್ತದೆ.




ಮಿಥೇನ್ ಅನಿಲ ಜ್ವಲನಶೀಲ. ಆದರೆ ಇಲ್ಲಿ ಮಿಥೇನ್ ಅನಿಲದೊಂದಿಗೆ ಇಂಗಾಲದ ಡೈ ಆಕ್ಸೈಡ್ ಉತ್ಪತ್ತಿಯಾಗುತ್ತದೆ. ಅದು ಮಿಥೇನ್ ಅನಿಲದ ಸುಲಭವಾಗಿ ಬೆಂಕಿಯನ್ನು ಉತ್ಪತ್ತಿ ಮಾಡುವ ಗುಣವನ್ನು ತಗ್ಗಿಸುತ್ತದೆ. ಆದುದರಿಂದಲೇ ಗೋಬರ್ ಅನಿಲ, ಪೆಟ್ರೋಲಿಯಂ ಅನಿಲಕ್ಕಿಂತ ಸುರಕ್ಷಿತ. ಆದರೆ ಗೋಬರ್ ಅನಿಲ ಉತ್ಪಾದಿಸುವ ಶಾಖ ಪೆಟ್ರೋಲಿಯಂ ಅನಿಲ ಉತ್ಪಾದಿಸುವ ಶಾಖಕ್ಕಿಂತ ಕಡಿಮೆ.

ಗೋಬರ್ ಗ್ಯಾಸ್ ತಯಾರಿಯ ಎಲ್ಲ ಹಂತಗಳು, ಆಮ್ಲಜನಕದ ಅನುಪಸ್ಥಿತಿಯಲ್ಲಿ ನಡೆಯುತ್ತವೆ. ಆದುದರಿಂದ ಈ ಕಾರ್ಯವನ್ನು ನಾವು ಹುದುಗುವಿಕೆ ಎಂದು ಕರೆಯುತ್ತೇವೆ. ಹುದುಗುವಿಕೆಯಿಂದಾಗ ಜೈವಿಕ ಘಟಕಗಳು ಡ್ರಮ್‌ನ ತಳಭಾಗದಲ್ಲಿ ಉಳಿಯುತ್ತವೆ ಮತ್ತು ಕೇವಲ ಮಿಥೇನ್ ಅನಿಲ ತನ್ನ ಕಡಿಮೆ ಸಾಂದ್ರತೆಯಿಂದಾಗಿ ಮೇಲೆ ಬಂದು, ಪೈಪಿನ ಮೂಲಕ ಸರಬರಾಜಾಗುತ್ತದೆ. ಕೆಳಗೆ ಉಳಿದಂತಹ ಜೈವಿಕ ಘಟಕಗಳನ್ನು ಸ್ಲರಿ ಎಂದು ಕರೆಯುತ್ತೇವೆ. ಸ್ಲರಿ ಇನ್ನೊಂದು ಪೈಪಿನ ಮೂಲಕ ಗೊಬ್ಬರದ ಹೊಂಡಕ್ಕೆ ಬೀಳುತ್ತದೆ. ಈ ಸ್ಲರಿ ಸಸ್ಯಗಳಿಗೆ ಅತ್ಯುತ್ತಮ ಗೊಬ್ಬರ.

ಗೋಬರ್ ಅನಿಲದ ಅನುಕೂಲತೆಗಳು:

೧. ಪೆಟ್ರೋಲಿಯಂ ಅನಿಲಕ್ಕಿಂತ ಸುರಕ್ಷಿತ ಹಾಗೂ ಅಗ್ಗ.
೨. ಸೆಗಣಿಯನ್ನು ದಿನ ನಿತ್ಯ ಟ್ಯಾಂಕಿಗೆ ಹಾಕಿ ಕದಡುತ್ತಿದ್ದರೆ ನಿರಂತರವಾಗಿ ಅನಿಲ ಸರಬರಾಜಾಗುತ್ತಿರುತ್ತದೆ.

ಗೋಬರ್ ಅನಿಲದ ಅನಾನುಕೂಲತೆಗಳು:

೧. ಕಡಿಮೆ ಶಾಖವನ್ನು ಉತ್ಪಾದಿಸುತ್ತದೆ.
೨. ಕೆಲವು ವರ್ಷಗಳು ಕಳೆದಾಗ ಡ್ರಮ್ಮಿನ ಕೆಳಭಾಗದಲ್ಲಿ ಮರಳು ಸಂಗ್ರಹವಾಗುತ್ತದೆ. ಕೆಲವೊಂದು ಸಲ ಡ್ರಮ್ಮಿನಲ್ಲಿ ತೂತುಗಳು ಉಂಟಾಗಬಹುದು. ಇದರಿಂದಾಗಿ

ಉತ್ಪಾದನೆಯಾದ ಅನಿಲ ನಷ್ಟವಾಗುತ್ತದೆ. ಆದರೆ ಈ ತೊಂದರೆಯನ್ನು ಸುಲಭವಾಗಿ ಪರಿಹರಿಸಬಹುದು.

ಇಂದು ಗೋಬರ್ ಅನಿಲವನ್ನು ಉಪಯೋಗಿಸಿ ದೀಪಗಳನ್ನು ಉರಿಸುತ್ತಾರೆ. ಇದು ವಿದ್ಯುಚ್ಛಕ್ತಿಯ ಕೊರತೆಯಿರುವಾಗ ಉಪಯೋಗಿಸಲು ಅತೀ ಉತ್ತಮ. ಹೆಚ್ಚಿನ ಪ್ರಮಾಣದಲ್ಲಿ ಗೋಬರ್ ಅನಿಲ ಉತ್ಪತ್ತಿಯಾದರೆ ವಿದ್ಯುಚ್ಛಕ್ತಿಯ ಬದಲಿಗೆ ಉಪಯೋಗಿಸಬಹುದೇನೋ!

ಗೋವಿನ ಸೆಗಣಿ ಕೇವಲ ಆರ್ಥಿಕ ಹಿನ್ನೆಲೆಯಲ್ಲಿ ಮಾತ್ರವಲ್ಲ. ಔಷಧೀಯ ದೃಷ್ಟಿಯಲ್ಲಿಯೂ ಅತ್ಯಂತ ಉಪಯುಕ್ತ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮನೆಯ ಅಂಗಳಕ್ಕೆ ಸೆಗಣಿ ಸಾರಿಸುತ್ತಾರೆ. ಇದರಿಂದ ಅಂಗಳ ಸ್ವಚ್ಛವಾಗಿ ಕಾಣುವುದಲ್ಲದೆ ರೋಗಕಾರಕ ಕ್ರಿಮಿಗಳೂ ನಾಶವಾಗುತ್ತವೆ. ಹಳ್ಳಿ ಮನೆಗಳಲ್ಲಿ ಊಟಮಾಡಿದ ಮೇಲೆ ಉಂಡ ಸ್ಥಳವನ್ನು ಸೆಗಣಿ ಹಾಕಿ ಸ್ವಚ್ಛಗೊಳಿಸುತ್ತಾರೆ. ಇದರ ಹಿಂದೆ ಕೇವಲ ದಾರ್ಮಿಕ ದೃಷ್ಟಿ ಮಾತ್ರವಲ್ಲದೆ ವೈಜ್ಞಾನಿಕ ದೃಷ್ಟಿಯೂ ಇದೆ. ಇದರಿಂದ ಇರುವೆ, ನೊಣ, ಮುಂತಾದ ಕೀಟಗಳನ್ನು ದೂರವಿಡಬಹುದು.



ಗೋಬರ್ ಅನಿಲದ ಮೂಲಕ ಮನುಷ್ಯ ತನ್ನ ಬದುಕನ್ನು ಹಸಿರಾಗಿಸಿಕೊಳ್ಳಬಹುದು. ಗೊಬ್ಬರದ ಮೂಲಕ ಸಸ್ಯಗಳ ಬದುಕನ್ನು ಹಸಿರಾಗಿಸಬಹುದು.

**– ಶೋಭನಾ ಯರ್ಮುಂಜ**

## ಕಗ್ಗಲಿಪುರದಲ್ಲಿ ಸಮರ್ಪಣ – ೨೦೦೮

### ಭಕ್ತಿ – ಭಾವ – ಶ್ರದ್ಧೆ – ಕೃತಜ್ಞತೆ

ಬೆಂಗಳೂರಿನ ದಕ್ಷಿಣಕ್ಕೆ ಕನಕಪುರ ರಸ್ತೆಗೆ ಹೊಂದಿಕೊಂಡಿರುವ ಕಗ್ಗಲಿಪುರದಲ್ಲಿರುವ ಅಮೃತಧಾರಾ ಗೋಶಾಲೆಯ ಆವರಣದಲ್ಲಿ ಫೆಬ್ರವರಿ ೧೭ರಂದು ಸಮರ್ಪಣ – ೨೦೦೮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರಧಾನವಾಗಿ ರೈತರ ಸಮಾವೇಶ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಪೂರ್ವಾಹ್ನ ೧೧ ಘಂಟೆಗೆ ರೈತರ ಸಮಾವೇಶವಿರುತ್ತದೆ. ಕನಕಪುರ ತಾಲೂಕಿನ ರೈತರ ಸಮಾವೇಶದಲ್ಲಿ "ಗೋಸಂರಕ್ಷಣೆಯ ಅಗತ್ಯ", "ಗೋವು ಮತ್ತು ಆರ್ಥಿಕತೆ" ಈ ವಿಷಯಗಳ ಬಗ್ಗೆ ಉಪನ್ಯಾಸ ಮತ್ತು ಚರ್ಚೆಗಳಿರುತ್ತವೆ. ಅಪರಾಹ್ನದ ಕಾರ್ಯಕ್ರಮಗಳಲ್ಲಿ ಗೋವಿಗಾಗಿ ಸದ್ದಿಲ್ಲದೆ ದುಡಿಯುತ್ತಿರುವ ಎಲೆಮರೆಯ ಕಾಯಿಗಳಿಗೆ ಸೇವಾಪುರಸ್ಕಾರ ನೀಡಲಾಗುತ್ತದೆ. ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ಆಶೀರ್ವಚನದ ನಂತರ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತವೆ. ಕದ್ರಿ ಗೋಪಾಲನಾಥರ ಶಿಷ್ಯ ಶ್ರೀಧರ ಸಾಗರ ಅವರಿಂದ ಸ್ಯಾಕ್ಸಾಫೋನ್ ವಾದನ, ರವಿಚಂದ್ರ ಮತ್ತು ತಂಡದವರಿಂದ ಕೊಳಲು ಪ್ರಧಾನವಾಗಿರುವ ವಾದ್ಯವೃಂದ ರೂಪಕ ಹಾಗೂ ಹೊಸನಗರದ ಶ್ರೀರಾಮಚಂದ್ರಾಪುರ ಮಠದ ತಂಡದವರಿಂದ ನೃತ್ಯ ರೂಪಕ ರೂಪಕವಿರುತ್ತದೆ. ಕೊನೆಯಲ್ಲಿ ಗೋವುಗಳಿಗೆ ನೀರಾಜನ ಮತ್ತು ದೀಪೋತ್ಸವ ಕಾರ್ಯಕ್ರಮಗಳಿರುತ್ತವೆ. ಸಮಸ್ತರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಇಡೀ ದಿನ ಗವ್ಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ಗವ್ಯ ಚಿಕಿತ್ಸೆಯ ವ್ಯವಸ್ಥೆ ಇರುತ್ತದೆ.



